





# ಥಾಯ್ಲಂಡಿನ ರೈಲು ಮಾರುಕಟ್ಟೆ

ಅದು ಹಾಸಿಕೊಂಡಿರುವ ರೈಲು ಹಳಿಗಳು. ಬೆಳಗಾಗುತ್ತಿದ್ದಂತೆಯೇ ಅದರ ಮೇಲೆ ಮಾರಾಟದ ವಸ್ತುಗಳು ಬಂದು ರಾಶಿ ಬೀಳುತ್ತವೆ. ಪ್ಲಾಸ್ಟಿಕ್ಕಿನ ಹಾಳೆಯ ಚಾವಣಿ ಮಾಡಿ ನೂರಾರು ಅಂಗಡಿಗಳು ಹಳಿಯ ಪಕ್ಕದಲ್ಲಿ ಹಾಗೂ ಮೇಲೆ ತಲೆ ಎತ್ತುತ್ತವೆ.

ವ್ಯಾಪಾರ ಆರಂಭವಾಗುತ್ತಿದ್ದಂತೆಯೇ ಕೊಳ್ಳಲು ಸಾಲು ಸಾಲು ಜನ ಬರುತ್ತಾರೆ. ಹಳಿಗಳಲ್ಲಿ ನಿಂತುಕೊಂಡೇ ಕೊಡು–ಕೊಳ್ಳುವಿಕೆ ನಡೆಯುತ್ತದೆ. ಆದರೆ ಬೆಳಗಿನ ಗಂಟೆ 8.37 ಆಗುತ್ತಿದ್ದಂತೆ ಎಲ್ಲ ವ್ಯಾಪಾರಿಗಳೂ ಮೈಗೆ ದೆವ್ವ ಬಂದವರಂತೆ ತರಾತುರಿಯಿಂದ ಹಳಿಯ ಮೇಲಿಟ್ಟಿದ್ದ ಬುಟ್ಟಿಗಳು, ಪೆಟ್ಟಿಗೆಗಳು ಎಲ್ಲವನ್ನೂ ತೆಗೆದು ದೂರ ತಂದಿಡುತ್ತಾರೆ. ಹಳಿಯಲ್ಲಿ ನಿಂತ ಗ್ರಾಹಕರು ದೂರ ಸರಿಯುತ್ತಾರೆ. ಸರಿಯಾಗಿ 8.40ಕ್ಕೆ ಪ್ರಯಾಣಿಕರ ರೈಲೊಂದು ಆ ಹಾದಿಯಲ್ಲಿ ಮುಂದೆ ಸಾಗುತ್ತದೆ. ಅದು ಸಿಳ್ಳೆ ಹೊಡೆದು ತಾನು ಬರುತ್ತಿರುವ ಸೂಚನೆ ಕೊಡುವುದಿಲ್ಲ. ಪ್ರಖರವಾದ ಲೈಟು ಬೆಳಗಿಸಿ ಕಣ್ಣು ಕುಕ್ಕುವುದಿಲ್ಲ. ತನ್ನ ಪಾಡಿಗೆ ಎಲ್ಲದರ ಪಕ್ಕವೇ ಸಾಗುತ್ತದೆ. ರೈಲು ದಾಟಿದ ಮರುಕ್ಷಣವೇ ಮತ್ತೆ ಮಾರುಕಟ್ಟೆಯಲ್ಲಿ ಜೀವಕಳೆ ತುಂಬುತ್ತದೆ.

ಹೌದು; ಇದು ಜಗತ್ತಿನಲ್ಲಿ ಇನ್ನೆಲ್ಲೂ ಕಾಣಸಿಗದ ರೈಲು ಮಾರುಕಟ್ಟೆ. ವಾರದ ಏಳು ದಿನಗಳಲ್ಲೂ ಕಿಕ್ಕಿರಿದ ವ್ಯಾಪಾರ ನಡೆಯುವ ಈ ಸಂತೆಯ ವಹಿವಾಟು 15 ಮೈಲು ವಿಸ್ತಾರವಾಗಿದೆ. ಇಲ್ಲಿ ದಿನದಲ್ಲಿ ನಾಲ್ಕು ಸಲ ನಿಗದಿತ ವೇಳೆಗೇ ರೈಲು ಬರುತ್ತದೆ.

ಇಂಥ ಅಪರೂಪದ ದಾಖಲೆಯ ರೈಲು ಮಾರುಕಟ್ಟೆ ಬ್ಯಾಂಕಾಕ್ ನಿಂದ 37 ಕಿ.ಮೀ.ದೂರದಲ್ಲಿದೆ. ದಿಢೀರಾಗಿ ನಿರ್ಮಾಣವಾಗುವ ಅಂಗಡಿಗಳಿಂದಾಗಿ 'ಬಿಡಿಸಿದ ಕೊಡೆಗಳ ಸಂತೆ' ಎಂಬ ಅನ್ವರ್ಥನಾಮವೂ ಅದಕ್ಕಿದೆ. ಬ್ಯಾಂಕಾಕ್‌ನಿಂದ ಸಮುತ್ ಸೋಗ್ರಂ ಎಂಬಲ್ಲಿಗೆ ಬರುವ 70 ಕಿ.ಮೀ. ಉದ್ದದ ಹಾದಿಯಲ್ಲಿ ನಡೆಯುವ ವ್ಯವಹಾರವಿದ್ದು, ರೈಲು ಹಳಿಗಳು 4 ಅಡಿ ಅಗಲವಿದೆ. ಇದರಲ್ಲಿ ಮೀಟರ್ ಗೇಜ್ ರೈಲು ಓಡುತ್ತದೆ.

1942ರ ವಿಶ್ವಯುದ್ಧದ ಕಾಲದಲ್ಲಿ ಈ ರೈಲು ಹಾದಿ ಮಿಲಿಟರಿಯವರ ವಶವಾಗಿ ಅವರ ಸರಕುಗಳ ಸಾಗಣೆಗೇ ಮೀಸಲಾಯಿತು.1946ರಲ್ಲಿ ರೈಲು ಮಾರ್ಗ ರಾಷ್ಟ್ರೀಕರಣಗೊಂಡು ಸ್ಟೇಟ್ ರೈಲ್ವೇ ಆಫ್ ಥಾಯ್ಲಂಡಿನ ವಶವಾಯಿತು. 1952ರಲ್ಲಿ ಗೂಡ್ಸ್ ರೈಲಿನ ಬದಲು ಪ್ರಯಾಣಿಕರ ರೈಲು ಆರಂಭವಾಯಿತು. ಆಗ ರೈತರು ಮತ್ತು ವ್ಯಾಪಾರಿಗಳು ರೈಲು ಹಳಿಯ ಮೇಲೆಯೇ ಬೆಳೆಗಳನ್ನು ಹರಡಿಕೊಂಡು ವ್ಯಾಪಾರ ಆರಂಭಿಸಿದರು. ಅಂದಿನಿಂದ ಇಂದಿನವರೆಗೂ ಈ ವಿಶಿಷ್ಟ ಮಾರುಕಟ್ಟೆ ಸಾಗಿಬಂದಿದೆ. 2002ರಲ್ಲಿ ಸರಕಾರ ಸಂಚರಿಸುವ ರೈಲುಗಳಿಗೆ ನಿರ್ದಿಷ್ಟವಾದ ವೇಳಾಪಟ್ಟಿ ತಯಾರಿಸಿ ಪ್ರತೀ ದಿನವೂ ಅದೇ ವೇಳೆಗೆ ರೈಲು ಈ ಹಾದಿಯಲ್ಲಿ ಚಲಿಸಬೇಕೆಂದು ನಿಯಮಿತಗೊಳಿಸಿತು. ತರಕಾರಿ ಮಾರುಕಟ್ಟೆಯ ಬಳಿ ರೈಲಿನ ವೇಗ ತಾಸಿಗೆ 30 ಕಿ.ಮೀ.ಮಾತ್ರ ಇರಬೇಕು,ಒಂದು ತಾಸಿನ ಪಯಣದಲ್ಲಿ ಅದು ಗುರಿ ತಲುಪಬೇಕು.

ಈ ಮಾರುಕಟ್ಟೆಯಲ್ಲಿ ಸಿಗದ ವಸ್ತುಗಳೆಂಬುದೇ ಇಲ್ಲ. ಪ್ರಮುಖವಾಗಿ ವಿಧವಿಧದ ತರಕಾರಿಗಳು, ಲೀಚಿ; ಡುರಿಯನ್, ಮಾವು ಮುಂತಾದ ತಾಜಾ ಹಣ್ಣು ಹಾಗೂ ಒಣಹಣ್ಣುಗಳು, ಹಸಿಮೀನು, ಒಣಮೀನು, ಮುಲಾಮುಗಳು, ಔಷಧಿಗಳು ಹೀಗೆ ಎಲ್ಲವೂ ಸಿಗುತ್ತವೆ.

■ ಪ. ರಾಮಕೃಷ್ಣ ಶಾಸ್ತ್ರಿ

